ನನ್ನ ಸೂಟ್‌ಕೇಸ್ ಇಳಿಸಿಕೊಂಡಿದ್ದೆ. ಇಲ್ಲೂ ಸ್ವಲ್ಪ ಕನ್‌ಫ್ಯೂಶನ್ ಆಗಿತ್ತು. ನನ್ನದೇ ಸೂಟ್‌ಕೇಸೆಂದು ಕನ್ಫರ್ಮ್ ಮಾಡಿಕೊಳ್ಳಲು ಅದನ್ನು ಬೆಲ್ಟ್ ಮೇಲೆಯೇ ಮೂರು ಸುತ್ತು ತಿರುಗಲು ಬಿಟ್ಟಿದ್ದೆ. ಅದನ್ನು ನಾನೇ ನನ್ನ ಹೆಂಡತಿಯ ಜೊತೆಯಲ್ಲಿ ಹೋಗಿ ಇಪ್ಪತ್ತು ದಿನಗಳ ಹಿಂದೆ ಕೊಂಡು ತಂದಿದ್ದರಿಂದ ಅದರ ಗುರುತು ಮೆದುಳಿನಲ್ಲಿ ಹೆಜ್ಜೆಯೂರಿ ಕುಳಿತಿತ್ತು. ಮೆದುಳಿನ ಬಗ್ಗೆ ಒಮ್ಮೆ ಮಾತನಾಡುತ್ತಾ ಆತ್ಮೀಯ ಗೆಳೆಯ ಹೃದಯತಜ್ಞ ಮತ್ತು ಜನರಲ್ ಫಿಸಿಷಿಯನ್ ಡಾಕ್ಟರ್ ಜೀಮೂತವಾಹನನು,

"ನೋಡು, ಡಿಯರ್ ಫ್ರೆಂಡ್ ರಾಯಲಪಾಡು ರಾಘವಶರ್ಮ ನೀನು ದೊಡ್ಡ ಸೈಕಾಲಜಿಸ್ಟ್ ಆಗಿದ್ದೀಯ, ಚಿಂತಕನಾಗಿದ್ದೀಯ ಮತ್ತು ದೊಡ್ಡ ಪೊಲಿಟಿಕಲ್, ಎಥಿಕಲ್ ಅಂಡ್ ಸೋಷಿಯಲ್ ಅಡ್ವೈಸರ್ ಆಗಿದ್ದೀಯ. ಮೆದುಳಿನ ಬಗ್ಗೆ ನಿನಗೂ ತಿಳಿದಿರುತ್ತದೆ. ಆದರೂ ಇನ್ನೊಮ್ಮೆ ಹೇಳುತ್ತೇನೆ ಕೇಳು ಮತ್ತು ಸದಾ ನೆನಪಿನಲ್ಲಿಟ್ಟುಕೋ. ಇವೊತ್ತು ಇಡೀ ಜಗತ್ತಿನಲ್ಲಿ ಆಗಿರುವ ಸಂಶೋಧನೆಗಳು, ಆವಿಷ್ಕಾರಗಳು ತಂತ್ರಜ್ಞಾನ, ಅಭಿವೃದ್ಧಿ ಎಲ್ಲವೂ ಸಾಧ್ಯವಾಗಿರುವುದು ಕೇವಲ ಎರಡರಿಂದ ಮೂರರಷ್ಟು ಮಾನವ ಮೆದುಳಿನ ಉಪಯೋಗದಿಂದ ಮಾತ್ರ. ಇನ್ನು ಮಿಕ್ಕಿದ ತೊಂಬತ್ತೇಳು ಪರ್ಸೆಂಟ್ ಬ್ರೈನ್ ಅಪ್ರಜ್ಞಾವಸ್ಥೆಯಲ್ಲೆ ಬಿದ್ದಿರುತ್ತದೆ. ನೀವು ಮನಃಶಾಸ್ತ್ರಜ್ಞರು ಕನಸುಗಳ ಬಗ್ಗೆ ಮಾತನಾಡುತ್ತೀರಲ್ಲ, ಅವು ಒಡಮೂಡುವುದು ಇಂಥ ಅಪ್ರಜ್ಞಾವಸ್ಥೆಯಲ್ಲಿ ಬಿದ್ದುಕೊಂಡಿರುವ ಅಗಾಧವಾದ ಮೆದುಳಿನ ಒಂದು ಸಣ್ಣ ದೂಳಿನಿಂದಲೇ. ಮನುಷ್ಯನ ದೇಹ, ಮನಸ್ಸು, ನಡವಳಿಕೆ ಮುಂತಾದುವುಗಳ ನಡುವೆ ಒಮ್ಮೊಮ್ಮೆ ಸಾಮ್ಯತೆಯೂ, ಕೆಲವೊಮ್ಮೆ ಊಹಿಸಲು ಸಾಧ್ಯವಾಗದಷ್ಟು ವ್ಯತ್ಯಾಸಗಳೂ ಕಂಡು ಬರುವುದು ಇದರಿಂದಾಗಿಯೇ. ಆದ್ದರಿಂದಲೇ ಮನುಷ್ಯನ ಹತ್ತಿರ ಯಾವ ಸಿದ್ಧಾಂತಗಳೂ ಸ್ಥಿರವಾಗಿರುವುದಿಲ್ಲ ಮತ್ತು ಮನುಷ್ಯ ಯಾವೊತ್ತೂ ತೃಪ್ತನಾಗಿ ರೂಪುಗೊಳ್ಳಲಾರ..." ಎಂದು ಹೇಳಿದ್ದ ಮಾತುಗಳು ಥಟ್ಟನೆ ನೆನಪಾಗಿ, ನನ್ನ ಮೆದುಳಿಗೆ ಸಣ್ಣದಾದ ಡ್ಯಾಮೇಜ್ ಗೀಮೇಜ್ ಆಗಿರಬಹುದೇ ಎಂಬ ಗುಮಾನಿಗೆ ಕ್ಷಣ ಒಳಗಾಗಿದ್ದೆ. ಸೂಟ್‌ಕೇಸ್ ಎಳೆದುಕೊಂಡು ಅರೈವಲ್ ಗೇಟ್ ಮೂಲಕ ಹೊರಗೆ ಬಂದಿದ್ದೆ. ನಾನು ಫ್ಲೈಟ್ ಹತ್ತುವ ಮೊದಲು ವಿಶಾಖಪಟ್ಟಣದ ಕಂಪನಿಯೊಂದರಲ್ಲಿ ಪಾರ್ಟನರ್ ಆಗಿರುವ ಗೆಳೆಯನೂ ಸಹಪಾಠಿಯೂ ಆಗಿದ್ದ ವಿಶ್ವನಾಥ ವೇಮುಲಶಾಸ್ತ್ರಿ ವಿಶಾಖಪಟ್ಟಣದಿಂದ ಫೋನ್ ಮಾಡಿ, "ಡಿಯರ್ ರಾಘವಶರ್ಮ, ಅರೈವಲ್ ಎಂಟ್ರೆನ್ಸ್ ಮುಂದೆ ನಮ್ಮ ಕಂಪನಿಯ ಕಾರು ಡ್ರೈವರ್ ನಿನ್ನ ನೇಮ್ ಪ್ಲೇಟ್ ಹಿಡಿದು ನಿಂತಿರುತ್ತಾನೆ. ಬಂಜಾರಾದ ಹೋಟೆಲ್ ತಾಜ್ ಡೆಕ್ಕನ್‌ನಲ್ಲಿ 908ನೆ ಸ್ಯೂಟ್ ನಿನಗೆ ಕಾದಿರಿಸಲಾಗಿದೆ. 909ರಲ್ಲಿ ಚೆರ್ಲಪಲ್ಲಿ ನರಸಿಂಹರೆಡ್ಡಿ ಇದ್ದಾರೆ. ಅದೇ ನಮ್ಮ ಕಂಪನಿಯ ಚೇರ್ಮನ್. ತುಂಬಾ ದೇಶಿ ಮನುಷ್ಯ. ಎನ್‌ಟಿಆರ್ ಪರಮಭಕ್ತ. ಸ್ವಲ್ಪ ಡಿಸ್ಟರ್ಬ್ ಆಗಿದ್ದಾರೆ. ನಾನು ರಾತ್ರಿ ಎಂಟು ಗಂಟೆಗೆಲ್ಲ ನಿಮ್ಮನ್ನು ಸೇರಿಕೊಳ್ಳುತ್ತೇನೆ..." ಎಂದು ಹೇಳಿದ್ದ. ಇವನನ್ನು ತುಂಬಾ ಕಿಲಾಡಿಯೆಂದೇ ಕಾಲೇಜು ದಿನಗಳಲ್ಲಿ ಸ್ನೇಹಿತರು ಕರೆಯುತ್ತಿದ್ದದ್ದು. ಬುದ್ಧಿವಂತಿಕೆಯಲ್ಲಿ ಸಾಧಾರಣ ಮಟ್ಟದಲ್ಲಿದ್ದರೂ, ಸಿಕ್ಕ ಎಂಥ ಸಣ್ಣ ಅವಕಾಶವನ್ನಾದರೂ ಉಪಯೋಗಿಸಿಕೊಂಡು ಅದರ ಗರಿಷ್ಠ ಲಾಭವನ್ನು ಪಡೆಯುವ ಚಾಕಚಕ್ಯತೆ ಉಳ್ಳವನು. ಆದ್ದರಿಂದಲೇ ಒಂದಾನೊಂದು ಕಾಲದಲ್ಲಿ ಸೈಕಲ್ಲಿಗೂ ಪರದಾಡುತ್ತಿದ್ದವನು ಇಂದು ದೂರದ ವಿಶಾಖಪಟ್ಟಣದಲ್ಲಿ ದೊಡ್ಡ ಶಿಪ್ಪಿಂಗ್ ಮತ್ತು ಫಿಶ್ಶಿಂಗ್ ಕಂಪನಿಯೊಂದರ ಪಾಲುದಾರನಾಗಿ ಸದಾ ವಿಮಾನಗಳಲ್ಲಿ ತಿರುಗಾಡುವ ಮಟ್ಟಕ್ಕೆ ಬೆಳೆದಿದ್ದಾನೆ. ಯಾರನ್ನಾದರೂ ತನ್ನ ಮಾತುಗಳಿಂದ ಮರುಳು ಮಾಡುವುದರಿಂದ ಅವನಿಗೆ ಮಾಯಕಾರ, ಮೋಡಿಗಾರ ಎಂಬ ಅಡ್ಡಹೆಸರುಗಳನ್ನೂ ಸ್ನೇಹಿತರು ಮೆತ್ತಿದ್ದೆವು.

ನಾನು ಕಾರು ಹತ್ತಿ ತಾಜ್ ಡೆಕ್ಕನ್ ತಲುಪಿದಾಗ ಮೂರು ಗಂಟೆಯಾಗಿತ್ತು. ವಿಮಾನದಲ್ಲಿ